

ಶಿಥಿಲಾವಸ್ಥೆ ತಲುಪಿರುವ ಶಾಲೆ

# ಬೆಟ್ಟದ ತುದಿಯಲಿ ಊರು ಶಾಲಾ ಮಕ್ಕಳಿಗಿಲ್ಲ ಸೂರು

ಬೆಟ್ಟದ ಮೇಲಿನ ಪುಟ್ಟ ಗ್ರಾಮ ಮೇದಿನಿ, ನಿಸರ್ಗ ಸೌಂದರ್ಯಕ್ಕೆ, ಸುಗಂಧ ಭತ್ತದ ಬೆಳೆಗೆ ಹೆಸರುವಾಸಿ. ಆದರೆ ಇಲ್ಲಿನ ಮಕ್ಕಳ ಭವಿಷ್ಯ ರೂಪಿಸಬೇಕಾದ ಶಾಲೆಯ ಪರಿಸ್ಥಿತಿ ಮರುಕ ಹುಟ್ಟಿಸುವಂತಿದೆ.

■ ಎಂ.ಜಿ. ನಾಯ್ಕ

ಸುಗಂಧದ ಭತ್ತದ ಬೆಳೆಗೆ, ಮುಗಿಲೆತ್ತರದ ಮರಗಳ ಪ್ರಕೃತಿ ಸೊಬಗಿಗೆ ಹೆಸರಾದ ಊರು ಮೇದಿನಿ. ಎಲ್ಲ ಊರುಗಳಂತಲ್ಲ ಈ ಮೇದಿನಿ. ಇದು ಬೆಟ್ಟದ ಮೇಲಿನ ಸುಂದರ ಊರು. ಆದರೆ ಈ ಊರಿನ ಪ್ರಕೃತಿಯ ಸೌಂದರ್ಯ ಜನಜೀವನದಲ್ಲಿಲ್ಲ ಎನ್ನುವುದನ್ನು ಇಲ್ಲಿನ ಶಾಲೆಯ ಸ್ಥಿತಿಗತಿಯೇ ಹೇಳುವಂತಿದೆ.

ಪ್ರಕೃತಿಯ ಮಡಿಲು, ಬುದ್ಧಿವಂತರ ಜಿಲ್ಲೆ ಎನಿಸಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗದ ಜನರು ಈಗಲೂ ಕನಿಷ್ಠ ಶಿಕ್ಷಣ ಸೌಲಭ್ಯಕ್ಕಾಗಿ ಪರದಾಡುತ್ತಿದ್ದಾರೆ ಎನ್ನುವುದಕ್ಕೆ ಮೇದಿನಿ ಕನ್ನಡ ಶಾಲೆ ಒಂದು ಉದಾಹರಣೆ.

ಮೇದಿನಿ ಗ್ರಾಮದಲ್ಲಿ ಬೆಳೆಯುವ ಸುಗಂಧ ಭತ್ತ (ಸಣ್ಣಕ್ಕಿ) ಪ್ರಕೃತಿ ಪೋಷಿಸಿಕೊಂಡು ಬಂದಿರುವ ವಿಶೇಷಗಳಲ್ಲೊಂದು. ಗ್ರಾಮದಲ್ಲಿ



ಏರುದಾರಿಯಲ್ಲಿ ಕಾಲ್ನಡಿಗೆಯಿಂದ ಮೇದಿನಿಗೆ ತೆರಳುತ್ತಿರುವ ಮಹಿಳೆ